# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 441 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ.ಶ್ರೀನಿವಾಸ್ (ಡಿಟಿಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಂದಾಯ ಇಲಾಖೆಯಡಿಯಲ್ಲಿ ಬರುವ ನ್ಯಾಯಾಲಯಗಳಲ್ಲಿ ಕಳೆದ 5 ವರ್ಷದಿಂದ ಇಲ್ಲಿಯವರೆಗೂ ಬಾಕಿ ಪ್ರಕರಣ, ಹೆಚ್ಚು ಅವಧಿಗೆ ಬಾಕಿ ಪ್ರಕರಣ ಹಾಗೂ ಆದೇಶಕ್ಕೆ ಬಾಕಿಯಿರುವ ಭೂ ವ್ಯಾಜ್ಯ ಪ್ರಕರಣಗಳ ಸಂಖ್ಯೆ ಎಷ್ಟು; ಹಾಗೂ ಬಾಕಿ ಉಳಿಯಲು ಇರುವ ಕಾರಣವೇನು? | ಕಂದಾಯ ಇಲಾಖೆಯಡಿಯಲ್ಲಿ ಬರುವ ನ್ಯಾಯಾಲಯಗಳಲ್ಲಿ ಕಳೆದ 5 ವರ್ಷಗಳಿಂದ ಬಾಕಿಯಿರುವ/ ಹೆಚ್ಚು ಅವಧಿಗೆ ಬಾಕಿಯಿರುವ/ ಆದೇಶಕ್ಕೆ ಬಾಕಿಯಿರುವ ಪ್ರಕರಣಗಳ ವಿವರವನ್ನು ಹಾಗೂ ಕಾರಣಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ | ಭೂ ವ್ಯಾಜ್ಯಗಳನ್ನು ಇಂತಿಷ್ಟು ಕಾಲಮಿತಿಯಡಿಯಲ್ಲಿ ಪೂರ್ಣಗೊಳಿಸಬೇಕೆಂಬ ನೀತಿ ನಿಯಮ ಹಾಗೂ ಮಾನದಂಡವನ್ನು ಸರ್ಕಾರ ರೂಪಿಸಿದೆಯೇ; | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 193 ಟಿ.ಆರ್.ಎಂ 2019 ದಿನಾಂಕ:18.02.2021 ರಂತೆ ಭೂ-ವ್ಯಾಜ್ಯಗಳನ್ನು ಪೂರ್ಣಗೊಳಿಸಲು ಈ ಕೆಳಗಿನಂತೆ ಕಾಲಮಿತಿಯನ್ನು ನಿಗಧಿಪಡಿಸಲಾಗಿರುತ್ತದೆ.<br>1. ತಹಶೀಲ್ದಾರ್‌ರವರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 129 ರನ್ವಯ ಪರಿಶೀಲಿಸಿ, ಅರ್ಜಿ ಸ್ವೀಕೃತಗೊಂಡ ಮೂರು (03) ತಿಂಗಳೊಳಗಾಗಿ ಇತ್ಯರ್ಥಪಡಿಸಲು ಕ್ರಮವಹಿಸುವುದು.<br>2. ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಿಸುವ ಮೇಲ್ಮನವಿ ಪ್ರಕರಣಗಳನ್ನು ಎದುರುದಾರರಿಗೆ ನೋಟೀಸು ನೀಡಿದ ದಿನದಿಂದ ಆರು (06) ತಿಂಗಳೊಳಗಾಗಿ ಇತ್ಯರ್ಥಪಡಿಸುವುದು.<br>ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ನಿರ್ದೇಶನಗಳನ್ನು ನೀಡಲಾಗುತ್ತಿದೆ. |
| ಇ | ಕಾಲಮಿತಿಯೊಳಗೆ ವ್ಯಾಜ್ಯವನ್ನು ಇತ್ಯರ್ಥ ಪಡಿಸದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ: | ಕಾಲಮಿತಿಯೊಳಗೆ ವ್ಯಾಜ್ಯವನ್ನು ಇತ್ಯರ್ಥ ಪಡಿಸದ ಅಧಿಕಾರಿಗಳ ಮೇಲೆ ಪೂರಕ ದಾಖಲೆಗಳ ವರದಿಯನ್ವಯ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು. |
| ಈ | ಬೆಂಗಳೂರು ನಗರ ಜಿಲ್ಲೆಯಲ್ಲೇ 16 ಸಾವಿರಕ್ಕೂ ಹೆಚ್ಚಾಗಿ ಭೂ ವ್ಯಾಜ್ಯ ಪ್ರಕರಣಗಳು ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಶೀಘ್ರವಾಗಿ ಇತ್ಯರ್ಥ ಪಡಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? | ಬಾಕಿಯಿರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಕಂದಾಯ ಇಲಾಖೆ ಆದೇಶ ಸಂಖ್ಯೆ: ಕಂಇ 188 ಟಿ.ಆರ್.ಎಂ 2023 ದಿನಾಂಕ:10.09.2024 ರಲ್ಲಿ ಪ್ರಸ್ತುತ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಬಾಕಿ ಇರುವ ಮೇಲ್ಮನವಿ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿ ವೃಂದಕ್ಕೆ ಸಮಾನಾಂತರ ವೃಂದದ |

| | | |
|---|---|---|
| | | ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದನ್ವಯ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 7 ವಿಶೇಷ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ರಚನೆ ಮಾಡಲಾಗಿರುತ್ತದೆ. 06 ತಿಂಗಳೊಳಗಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ನಿರ್ದೇಶನ ನೀಡಲಾಗಿರುತ್ತದೆ.<br>ಈ ಬಗ್ಗೆ ಮಾಹೆವಾರು ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದೆ. |

ಕಂಇ **173** ಎಂಆರ್‌ಆರ್ **2025**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಚು. ಗುರುತಿಲ್ಲದ ಪ್ರ. ಸಂ. ೪೪೧ ಕ್ಕೆ

# ಅನುಬಂಧ 1

| ಕ್ರ ಸಂ | ಜಿಲ್ಲೆ | ಬಾಕಿ ಇರುವ ಭೂ ವ್ಯಾಜ್ಯ ಪ್ರಕರಣಗಳು | ಅವಧಿವಾರು ಬಾಕಿ | | | | | | ಆದೇಶಕ್ಕೆ ಬಾಕಿ ಇರುವ ಪ್ರಕರಣ | ಬಾಕಿ ಇಡಲು ಕಾರಣ |
|---|---|---|---|---|---|---|---|---|---|---|
| | | | <1 ವರ್ಷ | 1-2 ವರ್ಷ | 2-3 ವರ್ಷ | 3-4 ವರ್ಷ | 4-5 ವರ್ಷ | 5 ವರ್ಷ ಮೇಲ್ಪಟ್ಟು | | |
| 1 | ಬಾಗಲಕೋಟೆ | 233 | 221 | 12 | 0 | 0 | 0 | 0 | 6 | ಸದರಿ ಪ್ರಕರಣಗಳು ಚಾಲ್ತಿ ಹಂತದಲ್ಲಿ ಇರುವುದರಿಂದ ಉಭಯ ಪಕ್ಷಿಗಾರರ ಪರ ನ್ಯಾಯಾವಾದಿಗಳು ಕಾಲಾವಕಾಶ ಕೇಳಿರುವುದರಿಂದ ಹಾಗೂ ಇತ್ತೀಚಿನ ಹೊಸ ಪ್ರಕರಣಗಳು ಇರುವುದರಿಂದ ವಿಚಾರಣಾ ಹಂತದಲ್ಲಿ ಬಾಕಿ ಇರುತ್ತದೆ.ಸದರಿ ಪ್ರಕರಣಗಳನ್ನು ನಿಗಧಿತ ಸಮಯದಲ್ಲಿ ಇತ್ಯರ್ಥ ಪಡಿಸಲಾಗುವುದು. |
| 2 | ಬಳ್ಳಾರಿ | 1315 | 1279 | 0 | 0 | 0 | 0 | 0 | 101 | ವಿಚಾರಣೆ ಹಂತದಲ್ಲಿ ಇವೆ. |
| 3 | ಬೆಂಗಳೂರು ಗ್ರಾಮಾಂತರ | 5598 | 2440 | 804 | 589 | 543 | 270 | 989 | 214 | ಕಂದಾಯ ನ್ಯಾಯಾಲಯಗಳು ಅರೆ ನ್ಯಾಯಿಕ ನ್ಯಾಯಾಲಯಗಳಾಗಿದ್ದು, ದೈನಂದಿನ ಆಡಳಿತ ಕೆಲಸ ಕಾರ್ಯಗಳ ಜೊತೆಗೆ ನ್ಯಾಯಾಲಯ ಕಲಾಪಗಳನ್ನು ನಡೆಸಲಾಗಿರುತ್ತದೆ. ಈ ಅವಧಿಯಲ್ಲಿ ಮೇಲಾಧಿಕಾರಿಗಳ ಸಭೆ, ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣಗಳಿಗೆ ಖುದ್ದು ಹಾಜರಾಗಬೇಕಾದ ಸಂಧರ್ಭ, ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾದ ಸಂಧರ್ಭಗಳಲ್ಲಿ ಕಲಾಪಗಳನ್ನು ಮುಂದೂಡಬೇಕಾಗಿರುತ್ತದೆ ಹಾಗೂ ಉಭಯತ್ರರಿಗೆ ನೋಟೀಸು ನೀಡಿ ಅವರ ಅಹವಾಲು, ದಾಖಲಾತಿಗಳನ್ನು ಸಲ್ಲಿಸಲು ಮತ್ತು ಪ್ರಕರಣದ ಪಕ್ಷಗಾರರು ಮೃತರಾದ ಸಂದರ್ಭದಲ್ಲಿ ಅವರ ವಾರಸುದಾರರನ್ನು ಸೇರ್ಪಡೆ ಮಾಡಲು ಕಾಲಾವಕಾಶ ನೀಡಿರುವುದರಿಂದ ಬಾಕಿ ಉಳಿದಿದ್ದು ಸರ್ಕಾರ ರೂಪಿಸಿದ ನಿಯಮಗಳಡಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ನಿಯಮಾನುಸಾರ ವಿಲೇಗೊಳಿಸಲಾಗುತ್ತಿರುತ್ತದೆ. |
| 4 | ಬೆಳಗಾವಿ | 1194 | 1173 | 21 | 0 | 0 | 0 | 0 | 188 | ಸದರಿ ಪ್ರಕರಣಗಳು ಚಾಲ್ತಿ ಹಂತದಲ್ಲಿ ಇರುವುದರಿಂದ ಉಭಯ ಪಕ್ಷಗಾರರ ಪರ ನ್ಯಾಯವಾದಿಗಳು ಕಾಲವಕಾಶ ಕೇಳಿರುವುದರಿಂದ ಹಾಗೂ.ಇತ್ತೀಚಿನ ಹೊಸ ಪ್ರಕರಣಗಳು ಇರುವುದರಿಂದ ವಿಚಾರಣೆ ಹಂತದಲ್ಲಿ ಬಾಕಿ ಇರುತ್ತವೆ. ಸದರಿ ಪ್ರಕರಣಗಳನ್ನು ನಿಗದಿತ ಸಮಯದಲ್ಲಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುವುದು |

| | | | | | | | | | | |
|---|---|---|---|---|---|---|---|---|---|---|
| 5 | ಬೆಂಗಳೂರು ನಗರ | 14430 | 3022 | 2656 | 1582 | 1242 | 1182 | 4746 | 830 | ಕಂದಾಯ ನ್ಯಾಯಾಲಯಗಳು ಅರೆ ನ್ಯಾಯಿಕ ನ್ಯಾಯಾಲಯಗಳಾಗಿದ್ದು, ದೈನಂದಿನ ಆಡಳಿತ ಕೆಲಸ ಕಾರ್ಯಗಳ ಜೊತೆಗೆ ನ್ಯಾಯಾಲಯ ಕಲಾಪಗಳನ್ನು ನಡೆಸಲಾಗಿರುತ್ತದೆ. ಈ ಅವಧಿಯಲ್ಲಿ ಮೇಲಾಧಿಕಾರಿಗಳ ಸಭೆ, ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣಗಳಿಗೆ ಖುದ್ದು ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾದ ಸಂಧರ್ಭ,ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾದ ಸಂಧರ್ಭಗಳಲ್ಲಿ ಕಲಾಪಗಳನ್ನು ಮುಂದೂಡಬೇಕಾಗಿರುತ್ತದೆ. ಪ್ರಕರಣದಲ್ಲಿ ವಾದಿ/ಪ್ರತಿವಾದಿಗಳು ವಿಚಾರಣೆಗೆ ಕಾಲಾವಕಾಶ ಕೋರಿರುವ ಕಾರಣ, ವಾದಿ/ಪ್ರತಿವಾದಿಗಳು ತಮ್ಮ ವಾದ/ಪ್ರತಿವಾದ ಮಂಡಿಸದೆ ಇರುವ ಕಾರಣ ಪ್ರಕರಣದಲ್ಲಿ ಪ್ರತಿವಾದಿಗಳಿಗೆ ನೋಟೀಸ್ ಜಾರಿಪಡಿಸಲು ಅಂಚೆ ಚೀಟಿ ಸಲ್ಲಿಸದ ಕಾರಣ ಪ್ರಕರಣದ ವಿಚಾರಣೆ ಬಾಕಿ ಇರುತ್ತದೆ. ಸರ್ಕಾರ ರೂಪಿಸಿದ ನಿಯಮಗಳಡಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ವಿಲೇಗೊಳಿಸಲಾಗುತ್ತಿರುತ್ತದೆ. |
| 6 | ಬೀದರ್ | 287 | 30 | 8 | 0 | 0 | 0 | 1 | 7 | 07 ಪ್ರಕರಣಗಳು ಆದೇಶಕ್ಕಾಗಿ ಕೊನೆಯ ವಿಚಾರಣೆಯಲ್ಲಿ ಮುಂದೂಡಲಾಗಿದ್ದು ಮುಂದಿನ ವಿಚಾರಣೆಯಲ್ಲಿ ವಿಲೇಗೊಳಿಸಲಾಗುವುದು. ವಿಚಾರಣೆ ಹಂತದಲ್ಲಿ ಇವೆ |
| 7 | ಚಾಮರಾಜನಗರ | 679 | 569 | 102 | 8 | 0 | 0 | 0 | 54 | ಬಾಕಿ ಇರುವ ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು ಸರ್ಕಾರದ ನಿರ್ದೇಶನದಂತೆ ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 8 | ಚಿಕ್ಕಬಳ್ಳಾಪುರ | 2708 | 1638 | 337 | 151 | 70 | 48 | 296 | 168 | ದೈನಂದಿನ ಆಡಳಿತ ಕೆಲಸ ಕಾರ್ಯಗಳ ಜೊತೆಗೆ ನ್ಯಾಯಾಲಯದ ಕಲಾಪಗಳನ್ನು ನಡೆಸಲಾಗುತ್ತದೆ. ಈ ಅವಧಿಯಲ್ಲಿ ಮೇಲಾಧಿಕಾರಿಗಳ ಸಭೆ, ಮಾನ್ಯ ಉಚ್ಚನ್ಯಾಯಾಲಯದ ಪ್ರಕರಣಗಳಿಗೆ ಖುದ್ದು ಹಾಜರಾಗಬೇಕಾದ ಸಂದರ್ಭ, ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾದ ಸಂದರ್ಭಗಳಲ್ಲಿ ಕಲಾಪಗಳನ್ನು ಮುಂದೂಡಬೇಕಾಗಿರುತ್ತದೆ . ಸರ್ಕಾರದ ನಿಯಮಗಳನ್ನು ಪಾಲಿಸುತ್ತಾ ಹಾಗೂ ವಾದಿ ಮತ್ತು ಪ್ರತಿವಾದಿಗಳ ವಾದವನ್ನು ನಿಯಮಾನುಸಾರ ಆಲಿಸಿ, ತ್ವರಿತಗತಿಯಲ್ಲಿ ಇತ್ಯರ್ಥಪಡಿಸಲು ಕ್ರಮವಹಿಸಲಾಗುತ್ತಿದೆ. |
| 9 | ಚಿಕ್ಕಮಗಳೂರು | 896 | 567 | 298 | 21 | 4 | 4 | 2 | 163 | ಬಾಕಿ ಇರುವ ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು, ಸರ್ಕಾರದ ನಿರ್ದೇಶನದಂತೆ ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮ ವಹಿಸಲಾಗುತ್ತಿದೆ. |

| | | | | | | | | | | |
|---|---|---|---|---|---|---|---|---|---|---|
| 10 | ಚಿತ್ರದುರ್ಗ | 1292 | 527 | 55 | 169 | 252 | 151 | 138 | 100 | ಅಪೀಲುದಾರರು/ಎದುರುದಾರರು ವಿಚಾರಣಾ ಸಂದರ್ಭದಲ್ಲಿ ಮೃತ ಹೊಂದಿದ್ದಲ್ಲಿ ಅವರ ನೈಜ ವಾರಸುದಾರರನ್ನು ಕಡತದ ಮೇಲೆ ತರಲು ಉಂಟಾಗುವ ವಿಳಂಬ ಹಾಗೂ ಪೀಠಾಧಿಕಾರಿಗಳು ವಿಚಾರಣಾ ದಿನಾಂಕದಂದು ಸರ್ಕಾರದ ತುರ್ತು ಕಾರ್ಯಗಳಲ್ಲಿ ನಿರತರಾದಂತಹ ಸಂಧರ್ಭದಲ್ಲಿ ವಿಚಾರಣೆಗಳನ್ನು ಮುಂದೂಡಾಲಾಗುತ್ತಿರುವುದರಿಂದ ಪ್ರಕರಣಗಳು ವಿಲೇವಾರಿಯಾಗದೇ ಬಾಕಿ ಉಳಿದಿರುತ್ತವೆ |
| 11 | ದಕ್ಷಿಣ ಕನ್ನಡ | 923 | 840 | 47 | 21 | 7 | 8 | 0 | 134 | ಪ್ರಕರಣವು ತನಿಖಾ ಹಂತದಲ್ಲಿದ್ದು ಸರ್ಕಾರದ ನಿರ್ದೇಶನದಂತೆ ಶೀಘ್ರ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುತ್ತಿದೆ |
| 12 | ದಾವಣಗೆರೆ | 465 | 461 | 4 | 0 | 0 | 0 | 0 | 69 | ಜಿಲ್ಲಾಧಿಕಾರಿಗಳ ವ್ಯಾಪ್ತಿಯಲ್ಲಿ ದಾಖಲಾಗುವಂತಹ ಮೇಲ್ಮನವಿಗಳಿಗೆ ಆದ್ಯತೆ ಮೇರೆಗೆ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಆದಾಗ್ಯೂ ಸಭೆ, ವಿಡೀಯೋ ಸಂವಾದ ಇನ್ನಿತರೆ ತುರ್ತು ಸಂದರ್ಭದಲ್ಲಿ ಮಾತ್ರ ನಿಗದಿಯಾಗಿರುವ ಪ್ರಕರಣಗಳನ್ನು ಮುಂದೂಡಲಾಗಿರುತ್ತದೆ. ಸದರಿ ಬಾಕಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ವಿಚಾರಣೆ ನಡೆಸಿ, ಇತ್ಯರ್ಥಪಡಿಸಲಾಗುತ್ತಿದೆ, |
| 13 | ಧಾರವಾಡ | 148 | 148 | 0 | 0 | 0 | 0 | 0 | 36 | ಬಾಕಿ ಉಳಿದಿರುವ ಪ್ರಕರಣಗಳೆಲ್ಲವು 03 ತಿಂಗಳೊಳಗಿನ ಪ್ರಕರಣಗಳಾಗಿದ್ದು ಅವುಗಳನ್ನು ನಿಗದಿತ ಅವಧಿಯಲ್ಲಿ ಇತ್ಯರ್ಥಪಡಿಸಲಾಗುವುದು. |
| 14 | ಗದಗ | 138 | 137 | 1 | 0 | 0 | 0 | 0 | 18 | ಸದರಿ ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತದೆ . ಸದರಿ ಪ್ರಕರಣಗಳನ್ನು ನಿಗಧಿತ ಅವಧಿಯಲ್ಲಿ ಇತ್ಯರ್ಥಪಡಿಸಲಾಗುವುದು |
| 15 | ಹಾಸನ | 516 | 484 | 0 | 1 | 0 | 0 | 31 | 11 | 5 ವರ್ಷ ಮೇಲ್ಪಟ್ಟು ಯಾವುದೇ ಪ್ರಕರಣ ಬಾಕಿ ಇರುವುದಿಲ್ಲ, ಆರ್.ಸಿ.ಸಿ.ಎಂ.ಎಸ್. ತಂತ್ರಾಶದಲ್ಲಿ ತಾಂತ್ರಿಕ ದೋಷವಿರುವುದರಿಂದ 5 ವರ್ಷ ಅವಧಿಯ 22 ಪ್ರಕರಣ ಬಾಕಿ ಇದ್ದು, ಸದರಿ ತಾಂತ್ರಿಕ ದೋಷವನ್ನು ಸರಿಪಡಿಸಲು ಕೋರಿ ಆರ್.ಆರ್.ಟಿ. 6675/24-25, ದಿ:13-11-2024 ಬರೆಯಲಾಗಿರುತ್ತದೆ.<br>5ವರ್ಷ ಮೇಲ್ಪಟ್ಟ 9 ಪ್ರಕರಣಗಳು ಈಗಾಗಲೇ ಮುಕ್ತಾಯಗೊಂಡಿರುತ್ತದೆ. ತಾಂತ್ರಿಕ ಸಮಸ್ಯೆ ಕಾರಣ ಆರ್.ಸಿ.ಸಿ.ಎಂ.ಎಸ್ ನಲ್ಲಿ ಮುಕ್ತಾಯಗೊಳಿಸಲು ಸಾಧ್ಯವಾಗುತ್ತಿರುವುದಿಲ್ಲ. |

| | | | | | | | | | |
|---|---|---|---|---|---|---|---|---|---|
| 16 | ಹಾವೇರಿ | 278 | 278 | 0 | 0 | 0 | 0 | 0 | 62 | ಹಾವೇರಿ ಜಿಲ್ಲೆಯಲ್ಲಿ ನಿಗದಿತ ಸಮಯದಲ್ಲಿ ಕಂದಾಯ ನ್ಯಾಯಾಲಯ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುತ್ತಿರುತ್ತದೆ. |
| 17 | ಕಲಬುರಗಿ | 427 | 427 | 0 | 0 | 0 | 0 | 0 | 0 | ಪ್ರಕರಣಗಳನ್ನು ನಿಗಧಿತ ಅವಧಿಯೊಳಗೆ ವಿಲೇಗೊಳಿಸಲಾಗುತ್ತಿದೆ. |
| 18 | ಕೊಡಗು | 222 | 222 | 0 | 0 | 0 | 0 | 0 | 11 | ಅವಧಿ ಮೀರಿ ಬಾಕಿ ಪ್ರಕರಣಗಳು ಯಾವುದು ಇರುವುದಿಲ್ಲ. ನಿಗಧಿತ ಅವಧಿಯೊಳಗಿನ ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು, ಸರಕಾರದ ನಿರ್ದೇಶನದಂತೆ ಶೀಘ್ರ ವಿಲೇವಾರಿಗೆ ಕ್ರಮಕೈಗೊಳ್ಳಲಾಗುತ್ತಿದೆ. |
| 19 | ಕೋಲಾರ | 2629 | 1651 | 312 | 188 | 98 | 40 | 340 | 43 | ವಿಚಾರಣೆ ಹಂತದಲ್ಲಿ ಇವೆ. |
| 20 | ಕೊಪ್ಪಳ | 339 | 339 | 0 | 0 | 0 | 0 | 0 | 0 | – |
| 21 | ಮಂಡ್ಯ | 1707 | 1582 | 125 | 0 | 0 | 0 | 0 | 0 | – |
| 22 | ಮೈಸೂರು | 1561 | 1310 | 17 | 61 | 132 | 19 | 22 | 130 | ಸರ್ಕಾರದ ಸುತ್ತೋಲೆಗಳ ನಿರ್ದೇಶನದಂತೆ ಭೂ ವ್ಯಾಜ್ಯ ಪ್ರಕರಣಗಳನ್ನು ಅತೀ ಶೀಘ್ರವಾಗಿ ಇತ್ಯರ್ಥಪಡಿಸಲಾಗು ತ್ತಿರುತ್ತದೆ. |
| 23 | ರಾಯಚೂರು | 675 | 4 | 6 | 0 | 0 | 0 | 1 | 0 | – |
| 24 | ಬೆಂಗಳೂರು ದಕ್ಷಿಣ | 2024 | 1429 | 315 | 154 | 66 | 12 | 48 | 58 | ಪ್ರಕರಣದಲ್ಲಿ ಪಕ್ಷಗಾರರು ದಾಖಲಾತಿಗಳನ್ನು ಸಲ್ಲಿಸಲು ಕಾಲಾವಕಾಶ ಕೋರಿರುವುದರಿಂದ ಹಾಗೂ ಕೆಲವು ಪ್ರಕರಣಗಳಲ್ಲಿ ಪಕ್ಷಗಾರರು ಮರಣ ಹೊಂದಿರುವುದಿರಿಂದ ಸದರಿಯವರ ವಾರಸುದಾರರನ್ನು ಪಕ್ಷಗಾರನ್ನಾಗಿ ಮಾಡಲು ಕಾಲವಕಾಶ ಕೋರಿರುವುದರಿಂದ ಹಾಗೂ ಕೆಲವು ಪ್ರಕರಣಗಳಲ್ಲಿ ಪೂರಕ ಧೃಡೀಕೃತ ದಾಖಲಾತಿಗಳನ್ನು ಸಲ್ಲಿಸಲು ಕಾಲಾವಕಾಶ ಕೋರಿರುವುದರಿಂದ ಬಾಕಿ ಇರುತ್ತದೆ. |

| | | | | | | | | | | |
|---|---|---|---|---|---|---|---|---|---|---|
| 25 | ಶಿವಮೊಗ್ಗ | 1133 | 846 | 201 | 66 | 20 | 0 | 0 | 98 | ಪ್ರಕರಣಗಳ ವಿಚಾರಣೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಕಲಾಪಗಳನ್ನು ನಡೆಸಿ ಇತ್ಯರ್ಥಪಡಿಸಬೇಕಿದ್ದು ಸರ್ಕಾರದ ನಿರ್ದೇಶನ ಹಾಗೂ ಸುತ್ತೋಲೆಗಳನ್ವಯ ನಿಗಧಿತ ಅವಧಿಯೊಳಗೆ ಪ್ರಕರಣಗಳ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 26 | ತುಮಕೂರು | 6290 | 1476 | 740 | 857 | 950 | 885 | 1382 | 218 | ಪ್ರಕರಣಗಳಲ್ಲಿ ಉಭಯತ್ರರಿಗೆ ನೋಟೀಸ್ ಜಾರಿ ಮಾಡಿಸಿ ದಾಖಲೆಗಳನ್ನು ನೀಡಲು ಸಾಕಷ್ಟು ಕಾಲಾವಕಾಶ ನೀಡುವುದು ಮತ್ತು ಉಭಯತ್ರರಲ್ಲಿ ವಾದಿ ಅಥವಾ ಪ್ರತಿವಾದಿಗಳು ಮರಣ ಹೊಂದಿದಲ್ಲಿ ಅವರ ವಾರಸ್ಸುದಾರರನ್ನು ದಾಖಲೆಗೆ ತರಲು ಕಾಲಾವಕಾಶ ನೀಡುವ ಹಾಗೂ ಆದೇಶಕ್ಕೆ ಕಾಯ್ದಿರಿಸಿ ಪ್ರಕರಣವನ್ನು ಆದೇಶ ಮಾಡಲು ಕಾಲವಿಳಂಬವಾಗುತ್ತದೆ. |
| 27 | ಉಡುಪಿ | 1408 | 1328 | 61 | 7 | 2 | 5 | 5 | 0 | ವಾದಿ ಮತ್ತು ಪ್ರತಿವಾದಿಗಳ ಕಡೆಯಿಂದ ಲಿಖಿತ ಆಕ್ಷೇಪಣೆ ಮತ್ತು ವಾದಾಂಶವನ್ನು ಮಂಡಿಸಲು ಹಾಗೂ ದಾಖಲೆಗಳನ್ನು ಒದಗಿಸಲು ಕಾಲಾವಕಾಶ ಕೋರುತ್ತಿರುವ ಹಿನ್ನಲೆಯಲ್ಲಿ ಪ್ರಕರಣವನ್ನು ಇತ್ಯರ್ಥಪಡಿಸಲು ಬಾಕಿ ಇರುತ್ತದೆ. |
| 28 | ಉತ್ತರ ಕನ್ನಡ | 232 | 232 | 0 | 0 | 0 | 0 | 0 | 46 | ನಿಗದಿತ ಅವಧಿಯಲ್ಲಿ ಕಂದಾಯ ನ್ಯಾಯಾಲಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾ ಗುವುದು. |
| 29 | ವಿಜಯನಗರ | 461 | 461 | 0 | 0 | 0 | 0 | 0 | 0 | – |
| 30 | ವಿಜಯಪುರ | 321 | 317 | 4 | 0 | 0 | 0 | 0 | 57 | – |
| 31 | ಯಾದಗಿರಿ | 300 | 300 | 0 | 0 | 0 | 0 | 0 | 0 | – |
| | ಒಟ್ಟು | **50829** | **25738** | **6126** | **3875** | **3386** | **2624** | **8001** | **2822** | – |

Digitally signed by
SUNIL KUMAR P
Date: 13-08-2025
11:03:00

[illegible]
ಕಂದಾಯ ಆಯುಕ್ತಾಲಯ
ಬೆಂಗಳೂರು

ಡಿ.ಸಿ. ಸುರುತಿಲ್ಲವ ಪ್ರ.ಸಂ.4141

## ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 193 ಟಿಆರ್‌ಎಂ 2019

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18.02.2021.

### ಸುತ್ತೋಲೆ

**ವಿಷಯ:** ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ / ತಹಶೀಲ್ದಾರರ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಅರ್ಜಿಗಳು / ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥಪಡಿಸುವ ಕುರಿತು ಮಾರ್ಗಸೂಚಿಗಳು.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂ:ಕಂಇ 21 ಎಲ್‌ಜಿಪಿ 2016, ದಿನಾಂಕ:20.8.2016
2. ಸರ್ಕಾರದ ಆದೇಶ ಸಂ:ಕಂಇ 152 ಎಲ್‌ಜಿಜಡ್ 2016, ದಿನಾಂಕ:18.10.2016
3. ಸರ್ಕಾರದ ಆದೇಶ ಸಂ:ಕಂಇ 152 ಎಲ್‌ಜಿಜಡ್ 2016, ದಿನಾಂಕ:04.03.2017
4. ಸರ್ಕಾರದ ಸುತ್ತೋಲೆ ಸಂ:ಕಂಇ 305 ಎಲ್‌ಜಿಬಿ 2017, ದಿನಾಂಕ:05.05.2018
5. ಸರ್ಕಾರದ ಸುತ್ತೋಲೆ ಸಂ:ಕಂಇ 11 ಟಿಆರ್‌ಎಂ 2019, ದಿನಾಂಕ:21.01.2019
6. ಸರ್ಕಾರದ ಆದೇಶ ಸಂ:ಕಂಇ 193 ಟಿಆರ್‌ಎಂ 2019, ದಿನಾಂಕ:16.07.2019
7. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:6872/2013 ಪ್ರಕರಣದ ಆದೇಶ ದಿನಾಂಕ:24.01.2020.

** * **

ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ / ತಹಶೀಲ್ದಾರರ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಅರ್ಜಿಗಳು ಮತ್ತು ಮೇಲ್ಮನವಿಯಂತಹ ಅರೆ ನ್ಯಾಯಿಕ ಪ್ರಕರಣಗಳಲ್ಲಿ ಶಾಸನಬದ್ಧ ಪ್ರಾಧಿಕಾರಗಳು ಸಂಬಂಧಪಟ್ಟ ಅರ್ಜಿದಾರರು, ಪ್ರತಿವಾದಿಗಳು ಹಾಗೂ ಅವಶ್ಯಕ ಇನ್ನಿತರೆ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ನಿಯಮಾನುಸಾರ ನೋಟೀಸ್‌ಗಳನ್ನು ಜಾರಿ ಮಾಡಿ, ದಾಖಲೆಗಳನ್ನು ಪಡೆದು, ಅಹವಾಲುಗಳನ್ನು ಆಲಿಸುವ ಮೂಲಕ ವಿಚಾರಣೆಯನ್ನು ನಡೆಸಿ ನಂತರ ಕಾನೂನಿನನ್ವಯ ಅರೆ ನ್ಯಾಯಿಕ ಅಧಿಕಾರವನ್ನು ಚಲಾಯಿಸಿ ತೀರ್ಪು / ಆದೇಶಗಳನ್ನು ಹೊರಡಿಸಬೇಕಾಗುತ್ತದೆ.

ಈ ರೀತಿಯ ಅರೆ ನ್ಯಾಯಿಕ ಪ್ರಕರಣಗಳಲ್ಲಿ ಅತಿ ವಿಳಂಬ ಧೋರಣೆ ಉಂಟಾದಲ್ಲಿ ಅರ್ಜಿದಾರರ ಹಿತಾಸಕ್ತಿಗೆ ತೀವ್ರ ಧಕ್ಕೆ ಮತ್ತು ಅನಾನುಕೂಲವಾಗಲಿದೆ. ಈ ಅಂಶಗಳನ್ನು ಅರೆ ನ್ಯಾಯಿಕ ಪ್ರಾಧಿಕಾರಗಳು ಗಮನದಲ್ಲಿಟ್ಟುಕೊಂಡು ಪ್ರಕರಣಗಳ ತ್ವರಿತ ವಿಲೇವಾರಿಗೆ ಕ್ರಮ ವಹಿಸುವುದು ಅತ್ಯವಶ್ಯವಿರುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ಉಲ್ಲೇಖ (1), (2) ಮತ್ತು (4)ರಲ್ಲಿನ ಸುತ್ತೋಲೆಗಳಲ್ಲಿ ಸರ್ಕಾರದಿಂದ ಹಲವಾರು ಸೂಚನೆ / ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಆದಾಗ್ಯೂ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬ ಧೋರಣೆ ಮುಂದುವರಿಯುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ.

ಮುಂದುವರಿದು, ಉಲ್ಲೇಖ (7)ರಲ್ಲಿನ ರಿಟ್ ಅರ್ಜಿ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸಹ ಅರೆ ನ್ಯಾಯಿಕ ಪ್ರಾಧಿಕಾರಗಳು ತಮ್ಮ ಶಾಸನಬದ್ಧ ಅಧಿಕಾರವನ್ನು ಚಲಾಯಿಸುವಲ್ಲಿ ಆಸಕ್ತಿಯಿಂದ ಸರಿಯಾಗಿ ಕಾರ್ಯನಿರ್ವಹಣೆ ಮಾಡದೆ ಅರೆ ನ್ಯಾಯಿಕ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದಕ್ಕೆ ತೀವ್ರ ಅತೃಪ್ತಿ ವ್ಯಕ್ತಪಡಿಸಿರುತ್ತದೆ. ಸದರಿ ರಿಟ್ ಅರ್ಜಿ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದಲ್ಲಿ

..2..

ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಕಂದಾಯ ನ್ಯಾಯಾಲಯಗಳಲ್ಲಿನ ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಕಂದಾಯ ನ್ಯಾಯಾಲಯಗಳಲ್ಲಿನ ಪಹಣಿ/ಆರ್.ಟಿ.ಸಿ./ಮ್ಯೂಟೇಷನ್ ದಾಖಲೆಗಳ ಬದಲಾವಣೆ/ತಿದ್ದುಪಡಿಗೆ ಸಂಬಂಧಿಸಿದ ಪ್ರಕರಣಗಳು/ ಮೇಲ್ಮನವಿಗಳ ನಿರ್ವಹಣೆಯ ಕುರಿತಾದ ಕಾರ್ಯವಿಧಾನಗಳಲ್ಲಿ ತರಬೇಕಾಗಿರುವ ಸುಧಾರಣಾತ್ಮಕ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಹಲವಾರು ಶಿಫಾರಸ್ಸು ಮತ್ತು ನಿರ್ದೇಶನಗಳನ್ನು ನೀಡಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿನ ಶಿಫಾರಸ್ಸು ಮತ್ತು ನಿರ್ದೇಶನಗಳ ಹಿನ್ನಲೆಯಲ್ಲಿ ಕಂದಾಯ ನ್ಯಾಯಾಲಯಗಳಲ್ಲಿನ ಅರೆ ನ್ಯಾಯಿಕ ಪ್ರಕರಣಗಳನ್ನು ಶೀಘ್ರ ಮತ್ತು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸಲು ಈಗಾಗಲೇ ಸರ್ಕಾರದಿಂದ ಹೊರಡಿಸಲಾಗಿರುವ ಸುತ್ತೋಲೆಗಳಲ್ಲಿನ ಸೂಚನೆಗಳು ಹಾಗೂ ಸ್ವಾಭಾವಿಕ ನ್ಯಾಯವನ್ನು ಗಮನದಲ್ಲಿರಿಸಿಕೊಂಡು, ಈ ಕೆಳಕಂಡ ಮಾರ್ಗಸೂಚಿಗಳನ್ನುಯ ಕಡ್ಡಾಯವಾಗಿ ಕಾರ್ಯನಿರ್ವಹಿಸಲು ನಿರ್ದೇಶನ ನೀಡಲಾಗಿದೆ.

1. ಮ್ಯುಟೇಷನ್, ಖಾತಾ ಮತ್ತು ಆರ್.ಟಿ.ಸಿ. ಬದಲಾವಣೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗುವ ಅರ್ಜಿಗಳು ವಿವಾದರಹಿತವಾದ ಪ್ರಕರಣಗಳಾಗಿದ್ದಲ್ಲಿ ಖಾತೆ ಬದಲಾವಣೆಯನ್ನು 60 ದಿನಗಳಲ್ಲಿ ಭೂಮಿ ತಂತ್ರಾಂಶದ ಮೂಲಕ ಸಕಾಲ ಸೇವೆಗಳಡಿ ಈಗಾಗಲೇ ಕ್ರಮವಹಿಸಲಾಗುತ್ತಿದೆ. ಸದರಿ ಅರ್ಜಿಯು ಆಸ್ತಿಯ ಹಕ್ಕಿನ ಹೊರತಾದ ವಿವಾದಿತ ಪ್ರಕರಣವಾಗಿದ್ದಲ್ಲಿ, ಸದರಿ ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 129 ರನ್ವಯ ಪರಿಶೀಲಿಸಿ, ಅರ್ಜಿ ಸ್ವೀಕೃತಗೊಂಡ ಮೂರು (03) ತಿಂಗಳೊಳಗಾಗಿ ಇತ್ಯರ್ಥಪಡಿಸಲು ತಹಶೀಲ್ದಾರ್‌ರವರು ಕ್ರಮವಹಿಸುವುದು.

2. ಮ್ಯುಟೇಷನ್, ಖಾತಾ ಮತ್ತು ಆರ್.ಟಿ.ಸಿ. ಬದಲಾವಣೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗುವ ಅರ್ಜಿಗಳು ಆಸ್ತಿಯ ಹಕ್ಕಿನ ಕುರಿತಾದ ವಿವಾದಕ್ಕೆ ಸಂಬಂಧಿಸಿದ್ದಲ್ಲಿ, ಈ ಬಗ್ಗೆ ತಹಶೀಲ್ದಾರವರು ನಿಯಮಾನುಸಾರ ಪರಿಶೀಲಿಸಿ, ಆಕ್ಷೇಪಣಾ ಅವಧಿ ಮುಕ್ತಾಯಗೊಂಡ ಹದಿನೈದು (15) ದಿನಗಳ ಒಳಗಾಗಿ ಉಭಯ ಪಕ್ಷಕಾರರಿಗೆ ಸಕ್ಷಮ ಸಿವಿಲ್ ನ್ಯಾಯಾಲಯಕ್ಕೆ ಮೊರೆ ಹೋಗುವಂತೆ ಸೂಕ್ತ ಹಿಂಬರಹ ನೀಡುವುದು.

3. ಕರ್ನಾಟಕ ಭೂ ಕಂದಾಯ ಅಧಿನಿಯಮಗಳು, 1964ರ ಕಲಂ 129 ರಡಿಯ ಪ್ರಕರಣದಲ್ಲಿ ತಹಶೀಲ್ದಾರರ ಆದೇಶದಿಂದ ಬಾಧಿತರಾದವರು ಕರ್ನಾಟಕ ಭೂ ಕಂದಾಯ ಅಧಿನಿಯಮಗಳು, 1964ರ (ಅಪೀಲು/ಪುನರೀಕ್ಷಣೆ) ಕಲಂ 136(2) ಹಾಗೂ 136(3) ರ ಅಡಿಯಲ್ಲಿ ಕ್ರಮವಾಗಿ ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಿಸುವ ಮೇಲ್ಮನವಿ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಎದುರುದಾರರಿಗೆ ನೋಟೀಸು ನೀಡಿದ ದಿನದಿಂದ ಆರು (06) ತಿಂಗಳ ಒಳಗಾಗಿ ಇತ್ಯರ್ಥಪಡಿಸುವುದು.

4. ತಹಶೀಲ್ದಾರರು, ಉಪ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ನಿಗಧಿತ ಕಾಲಮಿತಿಯೊಳಗೆ ಪ್ರಕರಣ / ಮೇಲ್ಮನವಿಗಳನ್ನು ಇತ್ಯರ್ಥಪಡಿಸಲು ಸಾಧ್ಯವಾಗದ ಪಕ್ಷದಲ್ಲಿ, ಸದರಿ ವಿಳಂಬಕ್ಕೆ ಸಮರ್ಪಕವಾದ ಕಾರಣಗಳನ್ನು ದಾಖಲಿಸಿ ಮೇಲಿನ ಅಧಿಕಾರಿಗಳಿಗೆ ವರದಿ ಮಾಡುವುದು ಹಾಗೂ ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮವಹಿಸುವುದು.

5. ಕಂದಾಯ ನ್ಯಾಯಾಲಯಗಳಲ್ಲಿ ದಾಖಲಾಗುವ ಎಲ್ಲಾ ಅರೆ ನ್ಯಾಯಿಕ ಪ್ರಕರಣಗಳನ್ನು ಆರ್.ಸಿ.ಸಿ.ಎಂ.ಎಸ್. ತಂತ್ರಾಂಶದ ಮೂಲಕವೇ ನಿರ್ವಹಿಸುವ ಕುರಿತಂತೆ ಉಲ್ಲೇಖ (5) ರ ಸರ್ಕಾರದ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಪ್ರಕರಣಗಳ ವಿಲೇವಾರಿಗೆ ಕ್ರಮ ಕೈಗೊಳ್ಳುವಂತೆ ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ.

6. ಖಾತಾ, ಮ್ಯುಟೇಶನ್ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ತಹಶೀಲ್ದಾರರು ಸದರಿ ಅರ್ಜಿಯಲ್ಲಿನ ವಿವಾದವು ಇನಾಂ ರದ್ಧತಿ ಕಾಯ್ದೆ, ಪಿಟಿಸಿಎಲ್ ಕಾಯ್ದೆ, ಸರ್ವೆ ಕೆಲಸ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿರುವುದೆ ಎಂಬುದರ ಕುರಿತು ಪರಿಶೀಲಿಸಿ, ಪ್ರತಿವಾದಿ/ತಕರಾರುದಾರರಿಗೆ ನೋಟೀಸ್ ಜಾರಿ ಮಾಡಿದ 30 ದಿನಗಳ ಕಾಲಾವಧಿಯೊಳಗೆ ಅರ್ಜಿದಾರರಿಗೆ ಸ್ಪಷ್ಟ ಮಾಹಿತಿಯನ್ನು ನೀಡಲು ಕ್ರಮವಹಿಸುವುದು.

7. ಕಂದಾಯ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ನಿರ್ವಹಿಸಲು ಜಾರಿಗೆ ತಂದಿರುವ ಆರ್.ಸಿ.ಸಿ.ಎಂ.ಎಸ್. ತಂತ್ರಾಂಶದಲ್ಲಿ ಪ್ರಕರಣಗಳ ಶೀಘ್ರ ವಿಲೇವಾರಿ ಹಾಗೂ ತಂತ್ರಾಂಶದ ಸುಧಾರಣೆ ತರುವ ನಿಟ್ಟಿಯಲ್ಲಿ ಉಲ್ಲೇಖ (3) ರ ಸರ್ಕಾರದ ಆದೇಶದಲ್ಲಿ ಜಿಲ್ಲೆ/ ಉಪ ವಿಭಾಗ/ತಾಲ್ಲೂಕು ಮಟ್ಟದ ಸಮಿತಿಗಳನ್ನು ಹಾಗೂ ಉಲ್ಲೇಖ (6)ರ ಸರ್ಕಾರದ ಆದೇಶದಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಆದೇಶಗಳನ್ವಯ ಕಂದಾಯ ನ್ಯಾಯಾಲಯ ಪ್ರಕರಣಗಳ ವಿಲೇವಾರಿ ಪ್ರಗತಿಯನ್ನು ಪರಿಶೀಲಿಸುವುದು. ಮುಂದುವರಿದು, ಪ್ರಾದೇಶಿಕ ಆಯುಕ್ತರುಗಳು ಕಂದಾಯ ನ್ಯಾಯಾಲಯ ಪ್ರಕರಣಗಳ ವಿಲೇವಾರಿಯ ಕುರಿತು ಪ್ರತಿ ತಿಂಗಳು ಸಭೆ ಕರೆದು ಪ್ರಗತಿ ಪರಿಶೀಲನೆ ನಡೆಸುವುದು.

19/02/2024

**(ಮಹೇಂದ್ರ ಜೈನ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ (ಪ್ರ).

**<u>ಇವರಿಗೆ:</u>**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ / ಮೈಸೂರು ವಿಭಾಗ / ಬೆಳಗಾವಿ ವಿಭಾಗ ಮತ್ತು ಕಲಬುರಗಿ ವಿಭಾಗ.
2. ಆಯುಕ್ತರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು.
3. ನಿರ್ದೇಶಕರು, ಭೂಮಿ ಮತ್ತು ಯು.ಪಿ.ಓ.ಆರ್., ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು
5. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ } - ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ
6. ಎಲ್ಲಾ ತಹಶೀಲ್ದಾರರುಗಳಿಗೆ
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**<u>ಪ್ರತಿ:</u>**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ & ಯು.ಪಿ.ಓ.ಆರ್.), ಬಹುಮಹಡಿ ಕಟ್ಟಡ
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಕಂದಾಯ), ಬಹುಮಹಡಿ ಕಟ್ಟಡ.

ಚು. ಗುರುತಿಲ್ಲದ ಪ್ರ.ಸಂ.441

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 188 ಟಿಆರ್ಎಂ 2023

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 10.09.2024.

## ತಿದ್ದುಪಡಿ ಅಧಿಸೂಚನೆ

ಕಂದಾಯ ಇಲಾಖೆಯ ಅರೆ ನ್ಯಾಯಿಕ ಪ್ರಾಧಿಕಾರಗಳಾದ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರುಗಳ ನ್ಯಾಯಾಲಯಗಳಲ್ಲಿ, ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಅರ್ಜಿಗಳು ಮತ್ತು ಮೇಲ್ಮನವಿಯಂತಹ ಅರೆ ನ್ಯಾಯಿಕ ಪ್ರಕರಣಗಳಲ್ಲಿ ಶಾಸನಬದ್ಧ ಪ್ರಾಧಿಕಾರಗಳು ಸಂಬಂಧಪಟ್ಟ ಅರ್ಜಿದಾರರು, ಪ್ರತಿವಾದಿಗಳು ಹಾಗೂ ಅವಶ್ಯಕ ಇನ್ನಿತರ ಸಂಬಂಧಿಸಿದ ಪ್ರಾಧಿಕಾರಗಳಿಗೆ ನಿಯಮಾನುಸಾರ ನೋಟೀಸ್‌ಗಳನ್ನು ಜಾರಿ ಮಾಡಿ, ದಾಖಲೆಗಳನ್ನು ಪಡೆದು, ಅಹವಾಲುಗಳನ್ನು ಆಲಿಸುವ ಮೂಲಕ ವಿಚಾರಣೆಯನ್ನು ನಡೆಸಿ ನಂತರ ಕಾನೂನಿನನ್ವಯ ಅರೆ ನ್ಯಾಯಿಕ ಅಧಿಕಾರವನ್ನು ಚಲಾಯಿಸಿ ತೀರ್ಪು/ಆದೇಶಗಳನ್ನು ಹೊರಡಿಸಬೇಕಾಗುತ್ತದೆ.

ಕಂದಾಯ ಅರೆ ನ್ಯಾಯಿಕ ಪ್ರಕರಣಗಳ ವಿಲೇವಾರಿಯನ್ನು ಪರಿಶೀಲಿಸಿದಾಗ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 136(2)ರಡಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲಾಗಿರುವ ಮೇಲ್ಮನವಿ ಪ್ರಕರಣಗಳು ಆಡಳಿತಾತ್ಮಕ ಕಾರಣಗಳಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ವಿಲೇವಾರಿಯಾಗದೆ ವಿಳಂಬವಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದ್ದು, ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಪ್ರಸ್ತುತ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಬಾಕಿ ಇರುವ ಮೇಲ್ಮನವಿ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿ ವೃಂದಕ್ಕೆ ಸಮಾನಾಂತರ ವೃಂದದ ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಲು ಉದ್ದೇಶಿಸಲಾಗಿರುತ್ತದೆ.

ಅದರಂತೆ, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 136(2)ರಡಿ ದಾಖಲಾಗಿ **ದಿನಾಂಕ 01.01.2024ರ ಅಂತ್ಯಕ್ಕಿದ್ದಂತೆ ಒಂದು/ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಬಾಕಿ ಇರುವ ಮೇಲ್ಮನವಿ ಪ್ರಕರಣಗಳನ್ನು**, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 10(2)ರನ್ವಯ ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 43(3) ಮತ್ತು 69ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ವಿಲೇವಾರಿ ಮಾಡಲು ಕಾರ್ಯಹಂಚಿಕೆ ಮಾಡಿ ಹೊರಡಿಸಲಾಗಿರುವ ದಿನಾಂಕ:10.01.2024, ದಿನಾಂಕ:01.04.2024 ಮತ್ತು 25.01.2024ರಂದು ಹೊರಡಿಸಲಾಗಿರುವ ಅಧಿಸೂಚನೆಗಳಲ್ಲಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಹಾಗೂ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಪಡಿಸಲು ಉಪ ವಿಭಾಗಾಧಿಕಾರಿ ವೃಂದಕ್ಕೆ ಸಮಾನಾಂತರ ವೃಂದದ ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಿ ಅಧಿಸೂಚಿಸಲಾಗಿದೆ.

ಈ ತಿದ್ದುಪಡಿ ಅಧಿಸೂಚನೆಯಲ್ಲಿ ಕಾರ್ಯಹಂಚಿಕೆ ಮಾಡಿರುವ ಉಪ ವಿಭಾಗಾಧಿಕಾರಿ ಹಾಗೂ ಸಮಾನಾಂತರ ವೃಂದದ ಅಧಿಕಾರಿಗಳ ನ್ಯಾಯಾಲಯಗಳಲ್ಲಿ ಪ್ರಸ್ತುತ **ಮುಕ್ತಾಯ ಹಂತದಲ್ಲಿರುವ**



Scanned with OKEN Scanner

ಪ್ರಕರಣಗಳನ್ನು ಹಾಗೂ ಆದೇಶಕ್ಕೆ ಕಾಯ್ದಿರಿಸಿರುವ ಪ್ರಕರಣಗಳನ್ನು ಈಗಾಗಲೇ ನಿರ್ವಹಿಸುತ್ತಿರುವ ಅಧಿಕಾರಿಗಳೇ ವಿಲೇವಾರಿ ಮಾಡಲು ಕ್ರಮವಹಿಸತಕ್ಕದ್ದು.

| ಕ್ರ ಸಂ | ಜಿಲ್ಲೆ ಮತ್ತು ಉಪ ವಿಭಾಗದ ಹೆಸರು | ಹಂಚಿಕೆ ಮಾಡಿರುವ ಪ್ರಕರಣಗಳ ವಿವರ | | |
|---|---|---|---|---|
| | | ಅಧಿಕಾರಿಯ ವಿವರ ಶ್ರೀಮತಿ/ಶ್ರೀ | ತಾಲ್ಲೂಕುಗಳ ಹೆಸರು | ಪ್ರಕರಣಗಳು (ದಿನಾಂಕ:31.8.2024 ಗೆ ಅನ್ವಯಿಸುವಂತೆ) |
| 1. | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ಉಪ ವಿಭಾಗ | ಉಪ ವಿಭಾಗಾಧಿಕಾರಿ ಬೆಂಗಳೂರು ದಕ್ಷಿಣ | | ಒಂದು ವರ್ಷದೊಳಗಿನ ಪ್ರಕರಣಗಳು |
| | | ಹೆಚ್. ಜಯ ವಿಶೇಷ ಭೂಸ್ವಾಧೀನಾಧಿಕಾರಿ, ಕೆಹೆಚ್‌ಬಿ, ಬೆಂಗಳೂರು. | | ಒಂದು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಎರಡು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ನಿಖಿತಾ ಎಂ. ಚಿನ್ನಸ್ವಾಮಿ ವಿಶೇಷ ಭೂಸ್ವಾಧೀನಾಧಿಕಾರಿ, ಡಾ: ವಿ. ಶಿವರಾಮ ಕಾರಂತ ಬಡಾವಣೆ, ಬೆಂಗಳೂರು. | ಉಪ ವಿಭಾಗದ ಎಲ್ಲಾ ತಾಲ್ಲೂಕುಗಳು | ಎರಡು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಮೂರು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ಸುದರ್ಶನ್ ಬಿ.ಕೆ, ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯ ಕಚೇರಿ, ಐ.ಎಂ.ಎ. ಮತ್ತು ಇತರೆ ವಂಚನೆ ಪ್ರಕರಣಗಳು | | ಮೂರು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಐದು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ಡಾ. ಬಿ. ಆರ್. ಹರೀಶ್, ವಿಶೇಷ ಭೂಸ್ವಾಧೀನಾಧಿಕಾರಿ, ಬಿಡಿಎ, ಬೆಂಗಳೂರು. | | ಐದು ವರ್ಷಗಳಿಗಿಂತ ಮೇಲ್ಪಟ್ಟ ಪ್ರಕರಣಗಳು |
| 2. | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ಉಪ ವಿಭಾಗ | ಉಪ ವಿಭಾಗಾಧಿಕಾರಿ ಬೆಂಗಳೂರು ಉತ್ತರ | | ಒಂದು ವರ್ಷದೊಳಗಿನ ಪ್ರಕರಣಗಳು |
| | | ಕೊಟ್ರೇಶ್ ಹೆಚ್. ಉಪ ವಿಭಾಗಾಧಿಕಾರಿ, ಬಿಬಿಎಂಪಿ (ಚುನಾವಣೆ) ಬೆಂಗಳೂರು | ಉಪ ವಿಭಾಗದ ಎಲ್ಲಾ ತಾಲ್ಲೂಕುಗಳು | ಒಂದು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಎರಡು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ನಿತಿನ್ ಚಕ್ಕಿ, ಆಡಳಿತಾಧಿಕಾರಿ, ಬಾಲಭವನ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು | | ಎರಡು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಐದು ವರ್ಷದೊಳಗಿನ ಬಾಕಿ ಪ್ರಕರಣಗಳು |



Scanned with OKEN Scanner

| ಕ್ರ. ಸಂ. | ಜಿಲ್ಲೆ ಮತ್ತು ಉಪ ವಿಭಾಗದ ಹೆಸರು | ಹಂಚಿಕೆ ಮಾಡಿರುವ ಪ್ರಕರಣಗಳ ವಿವರ | | |
|---|---|---|---|---|
| | | ಅಧಿಕಾರಿಯ ವಿವರ ಶ್ರೀಮತಿ/ಶ್ರೀ | ತಾಲ್ಲೂಕುಗಳು ಹೆಸರು | ಪ್ರಕರಣಗಳು (ದಿನಾಂಕ:31.8.2024 ಗೆ ಅನ್ವಯಿಸುವಂತೆ) |
| | | ಡಾ. ಬಿ. ಆರ್ ದಯಾನಂದ, ಪ್ರಧಾನ ವ್ಯವಸ್ಥಾಪಕರು (ಆಡಳಿತ & ಮಾನವ ಸಂಪನ್ಮೂಲ) ಬೆಂಗಳೂರು ವಿದ್ಯುತ್ ಸರಬರಾಜು ಕಂ. ನಿಯಮಿತ, ಬೆಂಗಳೂರು. | | ಐದು ವರ್ಷಗಳಿಗಿಂತ ಮೇಲ್ಪಟ್ಟ ಪ್ರಕರಣಗಳು |
| 3. | ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಉಪ ವಿಭಾಗ | ಉಪ ವಿಭಾಗಾಧಿಕಾರಿ, ದೊಡ್ಡ ಬಳ್ಳಾಪುರ | ಉಪ ವಿಭಾಗದ ಎಲ್ಲಾ ತಾಲ್ಲೂಕುಗಳು | ಎರಡು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ಡಾ. ಕಿರಣ್ ಎಸ್. ಮುಖ್ಯ ಆಡಳಿತಾಧಿಕಾರಿ ಸಂಜಯ್ ಗಾಂಧಿ ಇನ್ಸ್ಟಿಟ್ಯೂಟ್ ಆಫ್ ಟ್ರಾಮ ಅಂಡ್ ಆರ್ಥೋಪೆಡಿಕ್ಸ್, ಬೆಂಗಳೂರು. | | ಎರಡು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ನಾಲ್ಕು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ಪರ್ಣಿಕಾ ಪವನರಾಮ್, ಜನರಲ್ ಮ್ಯಾನೇಜರ್, (ಆಡಳಿತ), ಐಟಿಬಿಟಿ ಇಲಾಖೆ, ಬೆಂಗಳೂರು. | | ನಾಲ್ಕು ವರ್ಷಕ್ಕಿಂತ ಮೇಲ್ಪಟ್ಟ ಬಾಕಿ ಪ್ರಕರಣಗಳು |
| 4. | ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಉಪ ವಿಭಾಗ | ಉಪ ವಿಭಾಗಾಧಿಕಾರಿ, ಚಿಕ್ಕ ಬಳ್ಳಾಪುರ | ಉಪ ವಿಭಾಗದ ಎಲ್ಲಾ ತಾಲ್ಲೂಕುಗಳು | ಮೂರು ವರ್ಷದೊಳಗಿನ ಬಾಕಿ ಪ್ರಕರಣಗಳು. |
| | | ಅರ್ಜುನ್ ಒಡೆಯರ್, ಹೆಚ್ಚುವರಿ ಅಭಿಯಾನಾ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಅಭಿಯಾನ ಮಿಷನ್, ಬೆಂಗಳೂರು. | | ಮೂರು ವರ್ಷ ಮೇಲ್ಪಟ್ಟ ಬಾಕಿ ಪ್ರಕರಣಗಳು |
| 5. | ಕೋಲಾರ ಜಿಲ್ಲೆ, ಕೋಲಾರ ಉಪ ವಿಭಾಗ | ಉಪ ವಿಭಾಗಾಧಿಕಾರಿ, ಕೋಲಾರ | ಉಪ ವಿಭಾಗದ ಎಲ್ಲಾ ತಾಲ್ಲೂಕುಗಳು | ಎರಡು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ಮುಕುಂದಸ್ವಾಮಿ ಆರ್.ಜಿ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ವಿಭಾಗ, ಬೆಂಗಳೂರು ಪೂರ್ವ, ಬೆಂಗಳೂರು. | | ಎರಡು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಐದು ವರ್ಷದೊಳಗಿನ ಬಾಕಿ ಪ್ರಕರಣಗಳು |



Scanned with OKEN Scanner

| ಕ್ರ. ಸಂ. | ಜಿಲ್ಲೆ ಮತ್ತು ಉಪ ವಿಭಾಗದ ಹೆಸರು | ಹಂಚಿಕೆ ಮಾಡಿರುವ ಪ್ರಕರಣಗಳ ವಿವರ | | |
|---|---|---|---|---|
| | | ಅಧಿಕಾರಿಯ ವಿವರ ಶ್ರೀಮತಿ/ಶ್ರೀ | ತಾಲ್ಲೂಕುಗಳು ಹೆಸರು | ಪ್ರಕರಣಗಳು (ದಿನಾಂಕ:31.8.2024 ಗೆ ಅನ್ವಯಿಸುವಂತೆ) |
| | | ಮಮತ ಕುಮಾರಿ, ಸಹಾಯಕ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಪುನರ್ ವಸತಿ & ಪುನರ್ ನಿರ್ಮಾಣ) ಬೆಂಗಳೂರು | | ಐದು ವರ್ಷ ಮೇಲ್ಪಟ್ಟ ಬಾಕಿ ಪ್ರಕರಣಗಳು |
| 6. | ತುಮಕೂರು ಜಿಲ್ಲೆ, ತುಮಕೂರು ಉಪ ವಿಭಾಗ | ಉಪ ವಿಭಾಗಾಧಿಕಾರಿ, ತುಮಕೂರು | ಉಪ ವಿಭಾಗದ ಎಲ್ಲಾ ತಾಲ್ಲೂಕುಗಳು | ಒಂದು ವರ್ಷದೊಳಗಿನ ಪ್ರಕರಣಗಳು |
| | | ಜಂಬಗಿ ರೇಣುಕಪ್ರಸಾದ್ ದಿಲೀಪ್ ವಿಶೇಷ ಭೂಸ್ವಾಧೀನಾಧಿಕಾರಿ, ರಾಯದುರ್ಗ ರೈಲ್ವೆ ಯೋಜನೆ, ತುಮಕೂರು | | ಒಂದು ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಎರಡು ವರ್ಷದೊಳಗಿನ ಬಾಕಿ ಪ್ರಕರಣಗಳು |
| | | ಸೋಮಪ್ಪ ಕಡಕೋಳ ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ತುಮಕೂರು | | ಎರಡು ವರ್ಷಕ್ಕಿಂತ ಮೇಲ್ಪಟ್ಟ ಬಾಕಿ ಪ್ರಕರಣಗಳು |

ಬಾಕಿ ಇರುವ ಮೇಲ್ಮನವಿ ಪ್ರಕರಣಗಳನ್ನು ಕಾಯ್ದೆ ಮತ್ತು ನಿಯಮಗಳಿಗೆ ಅನುಸಾರವಾಗಿ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 193 ಟಿಆರ್ಎಂ 2019, ದಿನಾಂಕ:18.02.2021ರಲ್ಲಿನ ಮಾರ್ಗಸೂಚಿಗಳನ್ವಯ **ಆರು ತಿಂಗಳುಗಳ ಅವಧಿಯೊಳಗಾಗಿ ಕಡ್ಡಾಯವಾಗಿ ವಿಲೇವಾರಿ ಮಾಡತಕ್ಕದ್ದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Vimalamma C.

(ವಿಮಲಮ್ಮ. ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ಭೂ ಕಂದಾಯ ಮತ್ತು ಭೂ ಸುಧಾರಣಾ ಕೋಶ)

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಈ ಅಧಿಸೂಚನೆಯನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಕೋರಿದೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗಗಳು.



Scanned with OKEN Scanner

3. ಆಯುಕ್ತರು, ಕಂದಾಯ ಆಯುಕ್ತಾಲಯ, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ/ ಬೆಂಗಳೂರು ಗ್ರಾಮಾಂತರ/ ತುಮಕೂರು/ ಕೋಲಾರ ಜಿಲ್ಲೆ/ಚಿಕ್ಕಬಳ್ಳಾಪುರ ಜಿಲ್ಲೆ.
5. ಉಪ ವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ/ ಬೆಂಗಳೂರು ಉತ್ತರ/ ದೊಡ್ಡಬಳ್ಳಾಪುರ/ ಚಿಕ್ಕ ಬಳ್ಳಾಪುರ/ ತುಮಕೂರು/ ಕೋಲಾರ ಉಪ ವಿಭಾಗಗಳು.
6. ಸಂಬಂಧಪಟ್ಟ ತಹಶೀಲ್ದಾರರುಗಳು (ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ)
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ & ಯು.ಪಿ.ಓ.ಆರ್.), ಬಹುಮಹಡಿ ಕಟ್ಟಡ.
4. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಕಂದಾಯ), ಬಹುಮಹಡಿ ಕಟ್ಟಡ.

Scanned with OKEN S